2000-2001

1. ಜಾಮಿಯೂ ಮಸೀದಿ (ಸುನ್ನಿ) ಹೊಲವನಹಳ್ಳಿ, ಕೊರಟಗೆರೆ ತಾಲ್ಲೂಕು ರೂ. 20,000-00

2. ಖಬ್ರಸ್ತಾನ್ ಕೊಲಾಲ್, ಕೊರಟಗೆರೆ ತಾಲ್ಲೂಕು ರೂ. 25,000-00

3. ಖಬ್ರಸ್ತಾನ್ ಹೊಲವನಹಳ್ಳಿ, ಕೊರಟಗೆರೆ ತಾಲ್ಲೂಕು (ಷಿಯಾ) ರೂ. 25,000-00

2001-2002

1. ಜಾಮಿಯಾ ಮಸೀದಿಕೊಲಾಲ, ಕೊರಟಗೆರೆ ತಾಲ್ಲೂಕು ರೂ. 25,000-00

2. ಜಾಮಿಯಾ ಮಸೀದಿ ಕೊಲಾಲ, ಕೊರಟಗೆರೆ ತಾಲ್ಲೂಕು ರೂ. 20,000-00

3. ಜಾಮಿಯಾ ಮಸೀದಿ, ಅಕ್ಕಿರಾಪೂರ್ ಕೊರಟಗೆರೆ ತಾಲ್ಲೂಕು ರೂ. .30,000

ಇದನ್ನು ಹೊರತುಪಡಿಸಿ ಶಾದಿಮಹಲ್‌ಕ್ಕೆಯಾವುದೇ ಹಣ ಬಿಡುಗಡೆಯಾಗಿರುವುದಿಲ್ಲ.

3. ಇಲ್ಲ

4. ಸಂಬಂಧಪಟ್ಟ ವಕ್ಫ ಸಂಸ್ಥೆಗಳಿಂದ ಪ್ರಸ್ತಾವನೆಗಳು ಬಂದಲ್ಲಿ, ಅವುಗಳನ್ನು ಹಣದ ಲಭ್ಯತೆಯ ಅನುಸಾರ ಆದ್ಯತೆಯ ಮೇಲೆ ಪರಿಶೀಲಿಸಿ ಪರಿಗಣಿಸಲಾಗುವುದು.

ರಾಜ್ಯದ ಮೀನುಗಾರಿಕಾ ಉದ್ಯಮ ಅಭಿವೃದ್ಧಿ

386 (335) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ): ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ಲಭ್ಯವಿರುವ ಮೀನುಗಾರಿಕಾ ಬಂದರುಗಳು/ಧಕ್ಕೆಗಳು/ಜಟ್ಟಿಗಳು ಎಷ್ಟು?

ಆ. ಇವುಗಳಲ್ಲಿ ಎಷ್ಟು ಕಾರ್ಯನಿರ್ವಹಿಸುವ ಸ್ಥಿತಿಯಲ್ಲಿವೆ?

ಇ. ಉಳಿದವುಗಳನ್ನು ಅಭಿವೃದ್ಧಿಪಡಿಸಲು ಕೈಗೊಂಡಿರುವ ಕಾರ್ಯಸೂಚಿಗಳೇನು?

ಈ. ಇದಕ್ಕಾಗಿ ಮೀಸಲಿಟ್ಟ ಅನುದಾನವೆಷ್ಟು?

ಉ. ಎಷ್ಟು ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ;ಈ ಯೋಜನೆಗಳ ಮೊತ್ತವೆಷ್ಟು?

ಶ್ರೀ ವಸಂತ ವಿ.ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು)

ಅ. ಮೀನುಗಾರಿಕೆ ಬಂದರುಗಳು -5

ಧಕ್ಕೆಗಳು : ಜಟ್ಟಿಗಳು-6

ಇವುಗಳಲ್ಲಿದೆ ಮಂಗಳೂರು ಹಾಗೂ ಭಟ್ಕಳ ವಾಣಿಜ್ಯ ಧಕ್ಕೆಗಳನ್ನು ಸಹಾ ಮೀನುಗಾರಿಕೆಗೆ ಉಪಯೋಗಿಸಲಾಗುತ್ತದೆ.

ಆ. ಹೆಜಮಾಡಿ ಕೋಡಿ ಮತ್ತು ಗಂಗಾವಳಿಯ ಜೆಟ್ಟಿಗಳನ್ನು ಹೊರತುಪಡಿಸಿ ಉಳಿದೆಲ್ಲವೂ ಕಾರ್ಯನಿರ್ವಹಿಸುವ ಸ್ಥಿತಿಯಲ್ಲಿವೆ

ಇ. ಹೆಜ್‌ಮಾಡಿ ಕೋಡಿ ಮೀನುಗಾರಿಕೆ ಇಳಿದಾಣ:

ಉಡುಪಿ ಜಿಲ್ಲೆ ಹೆಜಮಾಡಿಯಲ್ಲಿ ರೂ.95.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಮೀನುಗಾರಿಕೆ ಇಳಿದಾಣದ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗಿದ್ದು ಬಹುತೇಕ ಕಾಮಗಾರಿಗಳು ಮುಗಿದಿದ್ದು, ನೀರು ಸರಬರಾಜು ವ್ಯವಸ್ಥೆ ಮಾತ್ರ ಬಾಕಿ ಇರುತ್ತದೆ ಧಕ್ಕೆಯ ಎದುರುಗಡೆ ನೀರು ಸಾಕಷ್ಟು ಹರಿಯದೆ ಹೂಳು ತುಂಬಿದ್ದು ನೀರು ಸರಾಗವಾಗಿ ಹರಿಯುವಂತೆ ಮಾಡಲು ನದಿಯಲ್ಲಿದ್ದ ತಡೆ ನಿವಾರಿಸಲು ಕ್ರಮ ವಹಿಸಲಾಗಿದೆ.

2. ಉತ್ತರಕನ್ನಡ ಜಿಲ್ಲೆಯ ಗಂಗಾವಳಿಯಲ್ಲಿ ಆರ್.ಐ.ಡಿ.ಎಫ್. ಯೋಜನೆಯಡಿ ಅಂದಾಜು ವೆಚ್ಚ ರೂ. 105.00 ಲಕ್ಷಗಳಲ್ಲಿ ಮೀನು ಗಾರಿಕಾ ಇಳಿದಾಣವನ್ನು ನಿರ್ಮಿಸಲು ಪ್ರಸ್ತಾಪಿಸಲಾಗಿರುತ್ತದೆ.

ಈ. 2002-03ನೇ ಸಾಲಿನ ಆಯವ್ಯಯದಲ್ಲಿ ರೂ.40.00 ಲಕ್ಷಗಳನ್ನು ಮೀಸಲಿಡಲಾಗಿದೆ.

ಉ. 5 ಮೀನುಗಾರಿಕೆ ಬಂದರುಗಳನ್ನು ಮತ್ತು 1 ಮೀನುಗಾರಿಕೆ ಇಳಿದಾಣವನ್ನು ಪೂರ್ಣ ಗೊಳಿಸಲಾಗಿದೆ. ಮೊತ್ತದ ವಿವರ ಕೆಳಕಂಡಂತಿದೆ:-

1. ಮಂಗಳೂರು 1ನೇ ಹಂತ ರೂ. 114.35ಲಕ್ಷ
2. ಮಲ್ಪೆ 1ನೇ ಹಂತ ರೂ. 546ಲಕ್ಷ
3. ಹೊನ್ನಾವರ ಮೀನುಗಾರಿಕೆ ಬಂದರು ರೂ. 120.98ಲಕ್ಷ
4. ತದಡಿ ಮೀನುಗಾರಿಕೆ ಬಂದರು ರೂ. 1137.68 ಲಕ್ಷ
5. ಕಾರವಾರ ಮೀನುಗಾರಿಕೆ ಬಂದರು ರೂ. 26.00ಲಕ್ಷ
6. ಕೋಡಿಬೆಂಗ್ರೆ ಮೀನುಗಾರಿಕೆ ಇಳಿದಾಣ ರೂ. 179.00ಲಕ್ಷ

ಕೊರಟಗೆರೆ ಕ್ಷೇತ್ರದ ವ್ಯಾಪ್ತಿಯಲ್ಲಿ ಪಶು ಚಿಕಿತ್ಸಾಲಯಗಳಲ್ಲಿ ಔಷಧಿಗಳ ಕೊರತೆ

378(674) ಶ್ರೀ ಚನ್ನಿಗಪ್ಪ ಸಿ. (ಕೊರಟಗೆರೆ) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕೊರಟಗೆರೆ ಕ್ಷೇತ್ರ ವ್ಯಾಪ್ತಿಯಲ್ಲಿ ಪಶು ಚಿಕಿತ್ಸಾಲಯ, ಪಶು ಆಸ್ಪತ್ರೆಗಳ ಸಂಖ್ಯೆ ಎಷ್ಟು ಪ್ರತಿದಿನ ಈ ಚಿಕಿತ್ಸಾಲಯಕ್ಕೆ ಪರೀಕ್ಷೆಗಾಗಿ ಬರುವ ಜಾನುವಾರುಗಳ ಸಂಖ್ಯೆ ಎಷ್ಟು:

ಆ. ಈ ಚಿಕಿತ್ಸಾಲಯಗಳಲ್ಲಿ ಔಷಧೋಪಚಾರದ ಕೊರತೆಯು ತೀವ್ರ ರೀತಿಯಲ್ಲಿರುವುದು ಗಮನಕ್ಕೆ ಬಂದಿದೆಯೇ:

ಇ. ಹಾಗಿದ್ದರೆ, ಜಾನುವಾರುಗಳ ಚಿಕಿತ್ಸೆಗೆ ಸಕಾಲದಲ್ಲಿ ಔಷಧೋಪಚಾರವನ್ನು ಒದಗಿಸುವ ವ್ಯವಸ್ಥೆ ಮಾಡಿ ಅನುಕೂಲ ಕಲ್ಪಿಸಿ (ಕೊಡುವುದು ಯಾವಾಗ)?

ಶ್ರೀ ಎಂ. ಮಹದೇವ್(ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ. ಪಶು ಆಸ್ಪತ್ರೆಗಳು -2
ಪಶು ಚಿಕಿತ್ಸಾಲಯ -2